ಶ್ರೀ ವಾಟಾಳ್ ನಾಗರಾಜ್ : ಅವರು ಬೇರೆ ಯಾರೋ ಸ್ವಾಮಿಗಳ ವಿಚಾರ ಹೇಳುತ್ತಿದ್ದಾರೆಂದು ಕಾಣುತ್ತದೆ.

ಶ್ರೀ ಜೆ.ಹೆಚ್.ಪಟೇಲ್ : ಮಾನ್ಯ ಸದಸ್ಯರ ಮನಸ್ಸಿಗೆ ಗೊತ್ತಿದೆ. ಯಾವ ಸ್ವಾಮಿಗಳು ಅವರ ಮನಸ್ಸಿನಲ್ಲಿದ್ದಾರೋ, ನನ್ನ ಮನಸ್ಸಿನಲ್ಲೂ ಅದೇ ಸ್ವಾಮಿಗಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಇದು ಬಹಳ ಸತ್ಯಕ್ಕೆ ದೂರವಾದುದು. ನಾವು ಅವರು 10-6 ವರ್ಷಗಳಿಂದ ಜೊತೆಯಲ್ಲಿದ್ದೇವೆ.

ಅಧ್ಯಕ್ಷರು : ಒಂದು ವಿಷಯ ನಿಮ್ಮಿಬ್ಬರಿಗೂ ಗೊತ್ತಿದ್ದು, ಅದನ್ನು ಬಚ್ಚಿಟ್ಟು ಮಾತನಾಡಿದಾಗ ಹಕ್ಕುಚ್ಯುತಿಗೆ ಬರುತ್ತದೆ. ಮತ್ತು ಬೇರೆ ಸದಸ್ಯರೂ ಸಹ ನಮಗೂ ಆ ಮಾಹಿತಿ ಬೇಕೆಂದು ಕೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಒಂದುವೇಳೆ ಅದನ್ನು ಹಕ್ಕುಚ್ಯುತಿ ನಿರ್ಣಯವಾಗಿ ಮಂಡಿಸಿದರೆ ಅದಕ್ಕೆ ಉತ್ತರ ಕೊಡುವವರು ಪಟೇಲರೇ ವಿನಾ ನಾವಲ್ಲ. ಈಗ ಸಮಯವಾಗಿರುವುದರಿಂದ ನನ್ನ ನಿರ್ಣಯದಿಂದ ಬಹಳ ಜನರಿಗೆ ತೊಂದರೆ ಕೊಡಲು ನಾನು ತಯಾರಿಲ್ಲ. ಏಕೆಂದರೆ, ಬಹಳ ಜನರು ಕಾದಿದ್ದಾರೆ.

ಶ್ರೀ ಜಿ.ಬಿ. ಶಿವಕುಮಾರ್ : ಅಧ್ಯಕ್ಷರೆ, ಚರ್ಚೆಯ ಪ್ರಾರಂಭದಲ್ಲೇ ಯೋಚನೆ ಮಾಡಿಕೊಂಡು ಈಗಲೇ ವಿಷಯಗಳು ಹೊರಗೆ ಬರುತ್ತಿರುವಾಗ ಇನ್ನು ಚರ್ಚೆ ಮುಂದುವರೆಸಿದರೆ ಬಹಳ ಜನರ ಸಂಗತಿಗಳು ಹೊರಗೆ ಬರುತ್ತದೆ. ತಾವು ಬೇಗ ಮುಗಿಸಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಅವರಿಗೆ ಮಾತನಾಡಲು ಹದಿನೈದು ನಿಮಿಷಗಳನ್ನು ಮಾತ್ರ ಕೊಡಲಾಗಿತ್ತು, ಈಗ 35 ನಿಮಿಷಗಳಾಯಿತು. ಅವರು ಇನ್ನೂ ಅಮಲಿನಲ್ಲಿಯೇ ಇದ್ದಾರೆ. ಚರ್ಚೆಯನ್ನು ನಾಳೆ ಮುಂದುವರೆಸಿ.

ಅಧ್ಯಕ್ಷರು : ಚರ್ಚೆಯನ್ನು ನಾಳೆಗೆ ಮುಂದುವರೆಸೋಣವೇ?

ಶ್ರೀ ವಾಟಾಳ್ ನಾಗರಾಜ್ : ನನಗೆ ಚರ್ಚೆ ಮಾಡಲು ಸ್ಫೂರ್ತಿ ಬರಲೇ ಇಲ್ಲ. ಇವರು ಇಷ್ಟೊಂದು ಜನರು ಕೂಗಾಡಿದರೆ ಎಲ್ಲಿಂದ ಸ್ಫೂರ್ತಿ ಬರಲು ಸಾಧ್ಯ?

ಅಧ್ಯಕ್ಷರು : ಈಗ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು 1995ರ ಕರ್ನಾಟಕ ರಾಜ್ಯ ಮಹಿಳಾ ಆಯೋಗ ವಿಧೇಯಕವನ್ನು ಪರ್ಯಾಲೋಚಿಸಲು ಸಭೆ ಮುಂದೆ ಮಂಡಿಸುವುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಸದರಿ ವಿಧೇಯಕದ ಬಗ್ಗೆ ಸ್ವಲ್ಪ ಚರ್ಚೆಯಾಗಬೇಕು. ಅದು ನಮ್ಮ ನಿರ್ಣಯಕ್ಕೆ ಬಿಟ್ಟ ವಿಚಾರ ತಮ್ಮಲ್ಲಿ ನನ್ನ ಮತ್ತೊಂದು ವಿನಂತಿಯೇನೆಂದರೆ ನಿನ್ನೆ ದಿವಸ ನಡೆಯಬೇಕಾಗಿದ್ದ ಕಾರ್ಯಕಲಾಪಗಳು ನಡೆಯದೆ ಮುಂದಕ್ಕೆ ಹೋಯಿತು. ತಮಗೆ ಗೊತ್ತಿರುವಂತೆ ಈ ಅಧಿವೇಶನ ಹತ್ತನೇ ತಾರೀಖಿನವರೆಗೆ ನಡೆಯುವುದೆಂದು ತೀರ್ಮಾನ ಮಾಡಿದ್ದೀರಿ. ನಿನ್ನೆ ನಡೆಯಬೇಕಾದ ಕಾರ್ಯಕಲಾಪ ನಡೆಯದಿದ್ದುದರಿಂದ ಅಧಿವೇಶನದ ಅವಧಿಯನ್ನು ಇನ್ನು ಒಂದು ದಿವಸ ಹೆಚ್ಚಿಗೆ ಮುಂದುವರೆಸಬೇಕಾಗುತ್ತದೆ. ತಾವು ದಯಮಾಡಿ ಆ ತೀರ್ಮಾನಕ್ಕೆ ಬರಬೇಕು. ನಿನ್ನೆಯ ಕಾರ್ಯಕಲಾಪದಲ್ಲಿ ಅನೇಕ ಸದಸ್ಯರು ಭಾಗವಹಿಸಬೇಕಾಗಿತ್ತು, ಕಲಾಪ ನಡೆಯದಿದ್ದರಿಂದ ನಾಳೆ ದಿವಸ ನಡೆಯುವ ಕಲಾಪದ ಚರ್ಚೆಯಲ್ಲಿ ಅವರುಗಳು ಭಾಗವಹಿಸಬೇಕಾಗಿದೆ. ಇದು ತಮಗೆ ತಿಳಿದಿರುವ ವಿಚಾರವೇ ಆಗಿದೆ.

ಅಧ್ಯಕ್ಷರು : ನಾನು ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳಲು ಆಗುವುದಿಲ್ಲ. ನಾಳೆ ಬೆಳಗ್ಗೆ 9.00 ಗಂಟೆಗೆ ನನ್ನ ಕಛೇರಿ ಕಾರ್ಯಲಯಕ್ಕೆ ವಿರೋಧ ಪಕ್ಷದ ನಾಯಕರು, ಉಪ ನಾಯಕರು, ಸಭಾ ನಾಯಕರು, ಎಲ್ಲರೂ ಬರುತ್ತಿದ್ದು, ತಾವೂ ಬಂದರೆ 10 ನಿಮಿಷ ಮಾತನಾಡಿ ನಿರ್ಧಾರ ತೆಗೆದುಕೊಳ್ಳೋಣ.

## ಶಾಸನ ರಚನೆ

### ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

### ಕರ್ನಾಟಕ ರಾಜ್ಯ ಮಹಿಳಾ ಆಯೋಗ ವಿಧೇಯಕ, 1995

### ಪರ್ಯಾಲೋಚನಾ ಪ್ರಸ್ತಾವ

ಶ್ರೀಮತಿ ಬಿ.ಟಿ.ಲಲಿತಾನಾಯಕ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) : ಮಾನ್ಯ ಅಧ್ಯಕ್ಷರೆ 1995ರ ಕರ್ನಾಟಕ ರಾಜ್ಯ ಮಹಿಳಾ ಆಯೋಗ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

(ಪ್ರಸ್ತಾವ ಮಂಡಿಸಲ್ಪಟ್ಟಿತು)

### ಪ್ರಕಟಣೆಗಳು

ಅಧ್ಯಕ್ಷರು : ಈಗ ಪ್ರಕಟಣೆಗಳು ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ.

(i) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 115ರ ಮೇರೆಗೆ ವಿಧಾನಸಭೆಯಿಂದ ಅಂಗೀಕೃತವಾದ 1995ನೇ ಸಾಲಿನ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ (ತಿದ್ದುಪಡಿ) ವಿಧೇಯಕವನ್ನು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಏಳನೇ ಏಪ್ರಿಲ್ 1995ರಂದು ತಿರಸ್ಕೃತವಾಯಿತೆಂದು ತಿಳಿಸುತ್ತೇನೆ.

(ii) ಮೇಲ್ಮನೆಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವೊಂದು ಬಂದಿರುತ್ತದೆ. ಕರ್ನಾಟಕ ವಿಧಾನಪರಿಷತ್‌ನ ಕಾರ್ಯವಿಧಾನ ಮತ್ತು ನಡವಳಿಕೆಗಳ 114ರ ಮೇರೆಗೆ ವಿಧಾನ ಸಭೆಯಲ್ಲಿ ಅಂಗೀಕೃತವಾದ ಕೆಳಕಂಡ ವಿಧೇಯಕಗಳನ್ನು ಕರ್ನಾಟಕ ವಿಧಾನ ಪರಿಷತ್‌ನಲ್ಲಿ ದಿನಾಂಕ 7-4-1995ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ.

1) ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ,1995

2) ಕರ್ನಾಟಕ ಕಾನೂನು ನೆರವು ಮಂಡಳಿ (ತಿದ್ದುಪಡಿ) ವಿಧೇಯಕ 1995

3) ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಒಕ್ಕಲೆಬ್ಬಿಸುವ) (ತಿದ್ದುಪಡಿ) ವಿಧೇಯಕ, 1995.

ಸಭೆಯು ಈಗ ಮುಕ್ತಾಯಗೊಂಡು ಪುನಃ ನಾಳೆ ಬೆಳಿಗ್ಗೆ 9.30 ಕ್ಕೆ ಸಮಾವೇಶಗೊಳ್ಳುವುದು.

(ಸದನವು ರಾತ್ರಿ 8-15ಕ್ಕೆ ಮುಕ್ತಾಯಗೊಂಡು ಮತ್ತೆ 8.4.95ರಂದು ಬೆಳಗ್ಗೆ 9.30ಕ್ಕೆ ಸಮಾವೇಶಗೊಳ್ಳಲು ತೀರ್ಮಾನಿಸಿತು)